**ಪಿ. ಡಬ್ಲ್ಯೂ: 1**

**( ಇಂದು ದಿಃ 07 /12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಆರೋಪಿ ಪರ ಶ್ರೀ ಯು ಹೆಚ್ ಎನ್ ವಕೀಲರಿಂದ,**

ಆರೋಪಿಯು ನನಗೆ ಸುಮಾರು 3 ವರ್ಷಗಳಿಂದ ನನಗೆ ಪರಿಚಯ . ಸದರಿ ಸಾಲದ ಮೊತ್ರಕ್ಕಾಗಿ ಆರೋಪಿಗೆ ಸುಮಾರು ಸಾರಿ ಫೋನ್ ಮಾಡಿರುತ್ತೇನೆ. ಆರೋಪಿಯ ಮೊಬೈಲ್ ನಂಬರ್ 9341744242 ಆಗಿದೆ. ಆರೋಪಿಯ ತಂದೆ ಹೆಸರು ಗೊತ್ತಿಲ್ಲ. ಆರೋಪಿಯ ವಿಳಾಸ ಗೊತ್ತಿದೆ. ನಾನು ಮೀನಿನ ವ್ಯಾಪಾರ ಮಾಡುತ್ತೇನೆ . ಆರೋಪಿಯೂ ಸಹ ಮೀನಿನ ವ್ಯಾಪಾರ ಮಾಡುತ್ತಾರೆ. ಆರೋಪಿಗೆ ರೂ. 1,50,000 ಅನ್ನು ನಗದಾಗಿ ಒಂದೇ ಬಾರಿ ಸಾಲ ನೀಡಿರುತ್ತೇನೆ. ಸಾಲವನ್ನು ಯಾವ ಉದ್ದೇಶಕ್ಕಾಗಿ ಪಡೆಯುತ್ತಿದ್ದಾರೆಂದು ನಾನು ಕೇಳಿರುವುದಿಲ್ಲ. ಸಾಲವನ್ನು ನೀಡುವ 2 ತಿಂಗಳ ಮೊದಲು ಆರೋಪಿಯು ಸಾಲವನ್ನು ಕೇಳಿದ್ದರು. ಕೆನರಾ ಬ್ಯಾಂಕಿನಲ್ಲಿ ನನ್ನ ಖಾತೆ ಇದೆ. ಮಿನಿನ ವ್ಯಾಪರದಿಂದ ಬಂದ ಮೊತ್ತವನ್ನು ಆರೋಪಿಗೆ ಸಾಲ ನೀಡಿರುತ್ತೇನೆ. ರೂ. 1,50,000 ದೊಡ್ಡ ಮೊತ್ತವಾಗಿದೆ. ಸಾಲ ನೀಡುವಾಗ ಕರಾರು ಪತ್ರವನ್ನು ಮಾಡಿಲ್ಲ. ರಶೀದಿಯನ್ನು ಪಡೆದಿಲ್ಲ. ಸಾಲ ನೀಡುವ ಕಾಲಕ್ಕೆ ಆರೋಪಿ ಯಿಂದ ಚೆಕ್ಕನ್ನು ಪಡೆದಿಲ್ಲ. ನಾನು ಆದಾಯ ತೆರಿಗೆ ಯನ್ನು ಕಟ್ಟುವುದಿಲ್ಲ. ನನಗೆ ರೂ. 1,50, 000 ಸಾಲ ನೀಡುವಷ್ಟ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಾಲದ ಮೊತ್ತವನ್ನು ತಡಿಲಿಯಲ್ಲಿ ನೀಡುವಾಗ ನಾನು ಮತ್ತು ಆರೋಪಿ ಇದ್ದೇವು. ವಕೀಲರ ನೋಟೀಸಿನಲ್ಲಿ ಯಾವ ದಿನಾಂಕಕೆಕ ಸಾಲ ನೀಡಿದ್ದೆವೆಂದು ನಮೂದಿಸಿರುತ್ತೇವೆ. ಸಾಲ ನೀಡುವ ಕಾಲಕ್ಕೆ ಕರಾರು ಪತ್ರ , ರಶೀದಿ ಮತ್ತು ಚೆಕ್ಕನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಗೆ ಬಡ್ಡಿಗಾಗಿ ಸಾಲ ನೀಡಿಲ್ಲ. ಚೆಕ್ಕನ್ನು ತಡಿಲಿ ಯಲ್ಲಿ ಕೊಟ್ಟಿರುತ್ತಾರೆ. ಆರೋಪಿಗೆ ಯಾವುದೇ ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನನಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಅಪರಿಚಿತ ಎಂದರೆ ಸರಿಯಲ್ಲ. ಆರೋಪಿಯು ತನ್ನ ಸ್ನೇಹಿತನಿಗೆ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿ ಅವನ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ**